## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಜಯಪುರ ಇವರ ನ್ಯಾಯಾಲಯ

**ಎಸ್.ಸಿ.ನಂ.74/2020**

**ಪಿಡಬ್ಲ್ಯೂ-18 (ಸಿಡಬ್ಲ್ಯೂ-41)**

ಸಾಕ್ಷಿದಾರರ ಹೆಸರು : ಬಸವರಾಜ ಪಾಟೀಲ

ತಂದೆಯ ಹೆಸರು : ಮಲಕನಗೌಡ

ವಯಸ್ಸು : **43** ವರ್ಷ

ಉದ್ಯೋಗ : ಪಿಐ, ತುರುವಾಳೂರು ಪಿಎಸ್, ಚಿತ್ರದುರ್ಗ ಜಿಲ್ಲೆ.

ವಾಸಸ್ಥಳ : ತುರುವಾಳೂರು, ಚಿತ್ರದುರ್ಗ.

**ಸಾಕ್ಷಿಗೆ ಇಂದು ದಿನಾಂಕ :- 03/12/2025 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ :- ಸರಕಾರಿ ಅಭಿಯೋಜಕರವರಿಂದ.**

ಮಾರ್ಚ 2016 ರಿಂದ ಅಕ್ಟೋಬರ್ 2016 ರವರೆಗೆ ನಾನು ವಿಜಯಪುರ ಗ್ರಾಮೀಣ ಪೋಲಿಸ್ ಠಾಣೆಯಲ್ಲಿ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: 07.07.2016 ರಂದು ರಾತ್ರಿ 8.00 ಗಂಟೆಗೆ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ, ನಮ್ಮ ಠಾಣಾ ಅಪರಾಧ ಸಂಖ್ಯೆ 205/2016 ರಂತೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಾನು ದಾಖಲಿಸಿಕೊಂಡ ಪ್ರಥಮ ವರ್ತಮಾನ ವರದಿ ಮತ್ತು ಸ್ವೀಕರಿಸಿದ ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನಿ.ಪಿ.14 ಮತ್ತು 01 ರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿ.ಪಿ.14(ಎ) ಮತ್ತು ನಿ.ಪಿ.1(ಸಿ) ಎಂದು ಗುರುತಿಸಲಾಯಿತು.

ಸದರಿ ಪ್ರಕರಣ ಗಂಭೀರ ಸ್ವರೂಪದ ಅಪರಾಧವಾಗಿದ್ದರಿಂದ ಮುಂದಿನ ತನಿಖೆಯನ್ನು ವೃತ್ತ ಪೋಲಿಸ್ ನಿರೀಕ್ಷಕರು, ವಿಜಯಪುರ ಗ್ರಾಮೀಣ ವೃತ್ತ, ಇವರಿಗೆ ಹಸ್ತಾಂತರಿಸಿರುತ್ತೇನೆ.

**ಪಿಡಬ್ಲ್ಯೂ-18 (ಸಿಡಬ್ಲ್ಯೂ-41)**

**ಪಾಟೀ ಸವಾಲು:- ಶ್ರೀ ಎಸ್.ಆರ್.ಕೆ., ವಕೀಲರಿಂದ ಆರೋಪಿತರ ಪರಃ**

ಈ ಘಟನೆ ವರದಿ ಆದ ದಿನ ನಮ್ಮ ಠಾಣೆಯಲ್ಲಿ ಸಿಪಿಸಿ ನಂ.728 ಶಶಿಕಾಂತ ಕರ್ತವ್ಯದಲ್ಲಿ ಇದ್ದ ಎಂದರೆ ಸರಿ. ಆ ದಿನ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ, 2 ನೇ ಆರೋಪಿ ಮತ್ತು 6 ನೇ ಆರೋಪಿಯನ್ನು ಸಿಪಿಸಿ ನಂ.728 ರವರು ಚಿಕಿತ್ಸೆಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಎಂದರೆ ಸರಿ. ಸಾಕ್ಷಿಯು ಠಾಣಾ ಪ್ರಭಾರದಲ್ಲಿ ಇದ್ದವರು ಕಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಆ ಬಗ್ಗೆ ನನಗೆ ಮಾಹಿತಿ ನೀಡಿ, ಅವರನ್ನು ಚಿಕಿತ್ಸೆಗೆ ಕಳುಹಿಸಿರುತ್ತಾರೆ ಎಂದರೆ ಸರಿ. ಆ ದಿನ ಸಂಜೆ 3 ರಿಂದ 4 ಗಂಟೆಗೆ ನನಗೆ ಆ ಬಗ್ಗೆ ಮಾಹಿತಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.1 ನ್ನು ಹಂಚನಾಳ ತಾಂಡಾ ನಂ.1 ರ 7-8 ಮಂದಿ ಠಾಣೆಗೆ ಬಂದು, ಠಾಣೆಯಲ್ಲಿಯೇ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.1 ನ್ನು ಪ್ರಕರಣಕ್ಕೆ ಅನುಕೂಲವಾಗುವಂತೆ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ದೂರು ನೀಡುವ ಸಮಯದಲ್ಲಿ ಚಾಸಾ-1 ರವರ ಮೈಮೇಲೆ ರಕ್ತದ ಕಲೆಗಳು ಇರಲಿಲ್ಲ. ಸಾಕ್ಷಿಯು ಮುಂದುವರೆದು ಅಂಗಿಯ ಮೇಲೆ ಸ್ವಲ್ಪ ರಕ್ತದ ಕಲೆ ಇದ್ದವು ಎಂದು ನುಡಿಯುತ್ತಾರೆ. ನಾನು ಆತನ ಬಟ್ಟೆಗಳನ್ನು ಅಮಾನತ ಪಡೆಸಿಕೊಂಡಿಲ್ಲ, ಕಾರಣ ತನಿಖೆಯನ್ನು ಸಿಪಿಐ ರವರಿಗೆ ಹಸ್ತಾಂತರಿಸಿರುತ್ತೇನೆ ಎಂದು ನುಡಿಯುತ್ತಾರೆ.

ನಿ.ಪಿ.1 ರಲ್ಲಿ "ಆ ದಿನ ಸಂಜೆ 5.30 ಗಂಟೆಗೆ ನಾವು ತಮ್ಮನ ಜೊತೆ ಕಟ್ಟೆಯ ಮೇಲೆ ಕುಳಿತಿದ್ದೇವು" ಎಂದು ಬರೆದಿಲ್ಲ ಎಂದರೆ ಸರಿ. ಸಾಕ್ಷಿಯು "6.00 ಗಂಟೆ ಸುಮಾರಿಗೆ ನಾನು, ನನ್ನ ತಾಯಿ ಮತ್ತು ನನ್ನ ತಂದೆ ಮನೆಯ ಮುಂದೆ ಇದ್ದಾಗ" ಎಂದು

ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ದೂರಿನಲ್ಲಿ "ನಾವು ಆರೋಪಿತರ ಮನೆಗೆ ಹೋದಾಗ ಅಲ್ಲಿ 2 ರಿಂದ 6 ನೇ ಆರೋಪಿತರು ಮನೆಯಲ್ಲಿ ಇದ್ದರು" ಎಂದು ಬರೆದಿಲ್ಲ ಎಂದರೆ ಸರಿಯಲ್ಲ. ದೂರಿನಲ್ಲಿ "6 ನೇ ಆರೋಪಿಯು ಮನೆಯ ಬಾಗಿಲ ಬಳಿ ನಿಂತಿದ್ದಳು ಎಂದು ಬರೆದಿಲ್ಲ" ಎಂದರೆ ಸರಿ. ದೂರಿನಲ್ಲಿ "1 ನೇ ಆರೋಪಿಯು ಹತ್ಯಾರದಿಂದ ನನ್ನ ತಂದೆಯ ಕುತ್ತಿಗೆಗೆ ಮತ್ತು ತಲೆಗೆ ಹೊಡೆದ ಬಗ್ಗೆ ಮಾತ್ರ ಬರೆದಿದ್ದು, ಕೈಗೆ ಹೊಡೆದ ಬಗ್ಗೆ ಬರೆದಿಲ್ಲ" ಎಂದರೆ ಸರಿ. ಆರೋಪಿತರು ನಮಗೆ ಬೆದರಿಕೆ ಹಾಕಿದಾಗ ತಲವಾರು ತೋರಿಸಿದರು ಎಂದು ದೂರಿನಲ್ಲಿ ಬರೆದಿಲ್ಲ ಎಂದರೆ ಸರಿ. ದೂರಿನಲ್ಲಿ "ನನ್ನ ತಂದೆಗೆ ಅಂಗಳದಲ್ಲಿ ತಂದೆವು, ಆಗ ನನ್ನ ತಂದೆಯ ಕೈಕಾಲು ತಂಪಾಗಿದ್ದವು" ಎಂದು ಬರೆದಿಲ್ಲ ಎಂದರೆ ಸರಿ. ನಾನು ಆರೋಪಿತರ ವಿರುದ್ಧ ಸುಳ್ಳು ದೂರನ್ನು ಸ್ವೀಕರಿಸಿ, ಸುಳ್ಳು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲಾ.**

*(ನನ್ನ ಉಕ್ತ ಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).*

ಓ.ಹೇ.ಕೇ. ಸರಿ ಅದೆ,

**Sd/-**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪುರ.

## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಜಯಪುರ ಇವರ ನ್ಯಾಯಾಲಯ

**ಎಸ್.ಸಿ.ನಂ.74/2020**

**ಪಿಡಬ್ಲ್ಯೂ-19 (ಸಿಡಬ್ಲ್ಯೂ- 35)**

ಸಾಕ್ಷಿದಾರರ ಹೆಸರು : ಸಿದ್ದಪ್ಪ ಪೂಜಾರಿ

ತಂದೆಯ ಹೆಸರು : ರೇವಪ್ಪ

ವಯಸ್ಸು : **34** ವರ್ಷ

ಉದ್ಯೋಗ : ಸಿಪಿಸಿ ನಂ.**739**, ಎಪಿಎಂಸಿ. ಪಿಎಸ್, ವಿಜಯಪುರ

ವಾಸಸ್ಥಳ : ವಿಜಯಪುರ

**ಸಾಕ್ಷಿಗೆ ಇಂದು ದಿನಾಂಕ :- 03/12/2025 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ :- ಸರಕಾರಿ ಅಭಿಯೋಜಕರವರಿಂದ.**

ಮಾರ್ಚ 2016 ರಿಂದ ಅಗಸ್ಟ 2024 ರವರೆಗೆ ವಿಜಯಪುರ ಗ್ರಾಮೀಣ ಪೋಲಿಸ್ ಠಾಣೆಯಲ್ಲಿ ಪೋಲಿಸ್ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: 09.09.2016 ರಂದು ಘಟನಾ ಸ್ಥಳವನ್ನು ಚಾಸಾ-37 ರವರಿಗೆ ತೋರಿಸಿದ್ದು, ಅಲ್ಲಿ ಚಾಸಾ-37 ರವರು ಪರಿಶೀಲಿಸಿ, ಘಟನಾ ಸ್ಥಳದ ನಕಾಶೆಯನ್ನು ತಯಾರಿಸಿಕೊಂಡು, ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನಿ.ಪಿ.13 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.13(ಬಿ) ಎಂದು ಗುರುತಿಸಲಾಯಿತು.

ದಿ: 19.09.2016 ರಂದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಅಮಾನತ ಪಡೆಸಿಕೊಂಡ ವಸ್ತುಗಳನ್ನು ಪ್ರಾದೇಶಿಕ ರಾಸಾಯನಿಕ ಪ್ರಯೋಗಾಲಯ, ಬೆಳಗಾವಿ ಇಲ್ಲಿಗೆ ರಾಸಾಯನಿಕ ಪರೀಕ್ಷೆಗೆ ತೆಗೆದುಕೊಂಡು ಹೋಗುವಂತೆ ಚಾಸಾ-42 ರವರ ಆದೇಶಿಸಿದ್ದು, ಅದೇ ದಿನ ಒಟ್ಟು 19 ವಸ್ತುಗಳನ್ನು ರಾಸಾಯನಿಕ ಪರೀಕ್ಷೆಗೆ ತೆಗೆದುಕೊಂಡು ಹೋಗಿ, ಪ್ರಾದೇಶಿಕ ರಾಸಾಯನಿಕ ಪ್ರಯೋಗಾಲಯ, ಬೆಳಗಾವಿಗೆ ತಲುಪಿಸಿರುತ್ತೇನೆ. ಈ ಬಗ್ಗೆ

ನಾನು ತನಿಖಾಧಿಕಾರಿಯವರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲು:- ಶ್ರೀ ಎಸ್.ಆರ್.ಕೆ., ವಕೀಲರಿಂದ ಆರೋಪಿತರ ಪರಃ**

ನಾನು ಘಟನಾ ಸ್ಥಳಕ್ಕೆ ಪ್ರಥಮ ಬಾರಿಗೆ ದಿ: 08.07.2016 ರಂದು ತನಿಖಾಧಿಕಾರಿಯವರೊಂದಿಗೆ ಭೇಟಿ ನೀಡಿರುತ್ತೇನೆ. ಸಾಕ್ಷಿಯು ಆ ಸಮಯದಲ್ಲಿ ನಾನು ಹಂಚನಾಳ ಬೀಟ್ ಕರ್ತವ್ಯದಲ್ಲಿ ಇದ್ದೆ ಎಂದು ನುಡಿಯುತ್ತಾರೆ. ದಿ: 07.07.2016 ರಂದು ನಾನು ಠಾಣೆಯಲ್ಲಿ ಕರ್ತವ್ಯದಲ್ಲಿ ಇದ್ದೆ. ನಾನು ದಿ: 08.07.2016 ರಂದು ಬೆಳಿಗ್ಗೆ ಅಂದಾಜು 8.30 ರಿಂದ 9.00 ಗಂಟೆ ಸುಮಾರಿಗೆ ಘಟನಾ ಸ್ಥಳಕ್ಕೆ ತನಿಖಾಧಿಕಾರಿಯವರ ಜೊತೆಗೆ ಹೋಗಿರುತ್ತೇನೆ. ನಾನು ಚಾಸಾ-37 ರವರಿಗೆ ಘಟನಾ ಸ್ಥಳವನ್ನು ತೋರಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.13 ಕ್ಕೆ ನಾನು ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ರಾಸಾಯನಿಕ ಪರೀಕ್ಷೆಗೆ ತೆಗೆದುಕೊಂಡು ಹೋದ ವಸ್ತುಗಳನ್ನು ತೆರೆದು ನೋಡಿರುವುದಿಲ್ಲ. ಸಾಕ್ಷಿಯು ಅವುಗಳು ಮೊಹರು ಮಾಡಿದ ಚೀಲಗಳಲ್ಲಿ ಇದ್ದವು ಎಂದು ನುಡಿಯುತ್ತಾರೆ. ನಾನು ನನ್ನ ಹೇಳಿಕೆಯಲ್ಲಿ ಆ ಚೀಲದ ಮೇಲೆ ಅಂಟಿಸಿದ ಚೀಟಿಯಲ್ಲಿ ನಮೂದಿಸಿ ವಸ್ತುಗಳನ್ನು ತೆಗೆದುಕೊಂಡು ಹೋಗಿರುತ್ತೇನೆ ಎಂದು ಹೇಳಿರುತ್ತೇನೆ. ನನಗೆ ವಸ್ತು ಸಂಖ್ಯೆ: 1 ಮತ್ತು 2 ನ್ನು ಎಲ್ಲಿಂದ ಅಮಾನತ ಪಡೆಸಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ವಸ್ತುಗಳನ್ನು ರಾಸಾಯನಿಕ ಪರೀಕ್ಷೆಗೆ ತೆಗೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ನಾನು ತನಿಖಾಧಿಕಾರಿಯವರ ಮುಂದೆ ಯಾವುದೇ ಹೇಳಿಕೆಯನ್ನು

ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಮೇಲಾಧಿಕಾರಿಗಳ ಮಾತು ಕೇಳಿ ಆರೋಪಿತರ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲಾ.**

*(ನನ್ನ ಉಕ್ತ ಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).*

ಓ.ಹೇ.ಕೇ. ಸರಿ ಅದೆ,

**Sd/-**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪುರ.